# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **633** |
| ಸದಸ್ಯರ ಹೆಸರು | : | ಶ್ರೀ ಛಲವಾದಿ.ಟಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಅವಘಡಗಳಿಂದ 1519 ಜನರು ಹಾಗೂ 1574 ಪ್ರಾಣಿಗಳ ಜೀವ ಹಾನಿಯಾಗಿರುವ ಕುರಿತು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು; (ವರ್ಷವಾರು ಮತ್ತು ಎಸ್ಕಾಂಗಳವಾರು ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ (2021-22, 2022-23 ಮತ್ತು 2023-24) ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಆಗಿರುವ ಮಾನವ ಪ್ರಾಣ ಹಾನಿ ಮತ್ತು ಜಾನುವಾರು ಪ್ರಾಣ ಹಾನಿ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br>ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಅವಘಡಗಳನ್ನು ತಡೆಯಲು ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.<br>ಸುರಕ್ಷಾ ಉಪಕರಣಗಳನ್ನು ಎಲ್ಲಾ ವಿ.ವಿ.ಕೇಂದ್ರ ಮತ್ತು ಸ್ವೀಕರಣಾ ಕೇಂದ್ರಗಳಿಗೆ ಒದಗಿಸಲಾಗಿದೆ. ಮತ್ತು ಯಾವುದೇ ಕೆಲಸ ನಿರ್ವಹಿಸುವಾಗ ಅರ್ಥಿಂಗ್ ವಲಯವನ್ನು ರಚಿಸಿ ಕೆಲಸ ಮಾಡಲು ಸೂಚಿಸಲಾಗಿದೆ. ವಿದ್ಯುತ್ ಅವಘಡ ತಡೆಗಟ್ಟಲು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ. ವಿ.ವಿ.ಕೇಂದ್ರ ಮತ್ತು ಸ್ವೀಕರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ತಪ್ಪದೆ ಮಾಡಲಾಗುತ್ತಿದೆ.<br>ಪ್ರಸರಣಾ ಮಾರ್ಗ, ಉಪ ವಿಭಾಗದಿಂದ ಈ ಕೆಳಕಂಡ ಸುರಕ್ಷಾ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>• ಇ.ಹೆಚ್.ಟಿ ವಿದ್ಯತ್ ಮಾರ್ಗದ ಕೆಳಗಡೆ/ಹತ್ತಿರ ನಿರ್ಮಿಸಿರುವ ಮನೆಗಳ ವಾರಸುದಾರರಿಗೆ ಸುರಕ್ಷಾ ಅರಿವನ್ನು ಮೂಡಿಸಲು ಹಲವು ಸಭೆಗಳನ್ನು ನಡಸಲಾಗಿದೆ.<br>• ಸುರಕ್ಷತಾ ಅರಿವು ಮೂಡಿಸಲು ಬಿತ್ತಿ ಪತ್ರಗಳನ್ನು ಹಂಚಲಾಗಿದೆ.<br>• ಸುರಕ್ಷತಾ ಅರಿವು ಮೂಡಿಸುವ ಬಿತ್ತಿ ಪತ್ರಗಳನ್ನು ಜನ ಸಂದಣಿ ಇರುವ ಜಾಗಗಳಲ್ಲಿ ಅಂಟಿಸಲಾಗಿದೆ.<br>• ಸುರಕ್ಷತಾ ಅರಿವು ಮೂಡಿಸುವ ಫಲಕಗಳನ್ನು ವಿದ್ಯುತ್ ಕೇಂದ್ರಗಳಲ್ಲಿ ಅಂಟಿಸಲಾಗಿದೆ.<br>• ಸುರಕ್ಷತಾ ಅರಿವು ಮೂಡಿಸುವ ಪ್ರಕಟಣೆಗಳನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ<br>• ಮುಂಗಾರಿನ ಪೂರ್ವದಲ್ಲಿ ಹೆಚ್ಚುವರಿ Insulators, Jumper ಇತ್ಯಾದಿ ಸಂಗ್ರಹ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಮಾರ್ಗಕ್ಕೆ ಸಂಬಂದಿಸಿದ Distance & Back up Relayಗಳನ್ನು ಪರಿಶೀಲಿಸಿ ಪ್ರಮಾಣಿಕರಿಸಿ ಸುಸ್ಥಿತಿಯಲ್ಲಿಡಲು ಕ್ರಮವಹಿಸಲಾಗುತ್ತಿದೆ. ಮಾರ್ಗಗಳ ನಿರ್ವಹಣೆಯನ್ನು ಕಾಲ ಮಿತಿಯಲ್ಲಿ ನಿರ್ವಹಿಸಲಾಗುತ್ತಿದೆ ಹಾಗೂ ವಿದ್ಯುತ್ ಕೇಂದ್ರದಲ್ಲಿ ಎಲ್ಲಾ ಉಪಕರಣಗಳನ್ನು ಸುಸ್ಥಿತಿಯಲ್ಲಿಡಲು ಕಾಲ ಮಿತಿಯಲ್ಲಿ ನಿರ್ವಹಣಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | • ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹಳೆಯದಾದ ಮತ್ತು ಶಿಥಿಲಗೊಂಡಿರುವ ಹೆಚ್.ಟಿ ಮತ್ತು ಎಲ್.ಟಿ ವಿದ್ಯುತ್ ವಾಹಕಗಳನ್ನು ಗುರುತಿಸಿ, ಆಯಾ ಆರ್ಥಿಕ ವರ್ಷದ ಕೆಪೆಕ್ಸ್ ಕಾಮಗಾರಿಗಳು, ಸ್ವಯಂ ಕಾಮಗಾರಿ ಯೋಜನೆಗಳಲ್ಲಿ ಹಾಗೂ ಆರ್ & ಎಂ ಬಜೆಟ್ ಗಳಲ್ಲಿ ಬದಲಾಯಿಸಲಾಗುತ್ತಿದೆ/ ಉನ್ನತೀಕರಿಸಲಾಗುತ್ತಿದೆ.<br>• ಅಪಾಯಕಾರಿ ಸ್ಥಿತಿಯಲ್ಲಿರುವಂತಹ ಮಾರ್ಗಗಳನ್ನು ಗುರುತಿಸಿ ಸೂಕ್ತ ಕ್ರಮಕೈಗೊಳ್ಳಲು ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಮಾರ್ಗ ಸೂಚಿಗಳನ್ನು ನೀಡಿದ್ದು, ಸರಿಪಡಿಸಲಾಗಿರುತ್ತದೆ.<br>• ಶಾಲಾ ಕಾಲೇಜುಗಳ ಮೇಲೆ ಹಾದು ಹೋಗಿರುವ 11 ಕೆವಿ ವಿತರಣಾ ವ್ಯವಸ್ಥೆಯನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಗೊಳಿಸಲಾಗಿದೆ.<br>ವಿತರಣಾ ವ್ಯವಸ್ಥೆಯ ಮೇಲಿರುವ ಎಲ್ಲಾ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಈಗಾಗಲೇ ಕ್ರಮವಹಿಸಲಾಗಿದೆ. |
| ಆ) | ವಿದ್ಯುತ್ ಸುರಕ್ಷಿತ ಬಳಕೆಯ ಕುರಿತು ಜನಜಾಗೃತಿ ಮೂಡಿಸಲು ಹಾಗೂ ವಿದ್ಯುತ್ ಅಪಘಾತಗಳ ಸಂಖ್ಯೆ ಮಿತಿಗೊಳಿಸಲು ಸಾರ್ವಜನಿಕರಲ್ಲಿ ಹಾಗೂ ಸಿಬ್ಬಂದಿಗಳಲ್ಲಿ ಅರಿವು ಮೂಡಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; | ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಅವಘಡಗಳು ಸಂಭವಿಸದಂತೆ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ವಿದ್ಯುತ್ ಸುರಕ್ಷಿತ ಬಳಕೆಯ ಕುರಿತು ಜನಜಾಗೃತಿ ಮೂಡಿಸಲು ಹಾಗೂ ವಿದ್ಯುತ್ ಅಪಘಾತಗಳ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಸಿಬ್ಬಂದಿಗಳಲ್ಲಿ ಅರಿವು ಮೂಡಿಸಲು ಕೈಗೊಳ್ಳುತ್ತಿರುವ ಕ್ರಮಗಳ ವಿವರಗಳು ಕೆಳಕಂಡಂತಿವೆ:<br>**<u>ಕವಿಪ್ರನಿನಿ</u>**:<br>**<u>ಸಾರ್ವಜನಿಕರ ಸುರಕ್ಷತೆ ಕುರಿತು:</u>**<br>• ವಿದ್ಯುತ್ ಅಪಘಾತಗಳನ್ನು ತಡೆಗಟ್ಟಿ ಜೀವಹಾನಿ ಆಗದಂತೆ ಕ್ರಮ ಕೈಗೊಳ್ಳಲು ಪ್ರತಿ ತಿಂಗಳು ಟಿ.ಎಲ್ ಅಂಡ್ ಎಸ್.ಎಸ್, ವಿಭಾಗ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಸುರಕ್ಷತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ಮತ್ತು ವಿದ್ಯುತ್ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ತಿಳುವಳಿಕೆ ನೀಡಲಾಗುತ್ತಿರುತ್ತದೆ.<br>• ವಿದ್ಯುತ್ ಮಾರ್ಗಗಳ ಸನಿಹದಲ್ಲಿ/ಕೆಳಗೆ ಕಟ್ಟಡಗಳನ್ನು ನಿರ್ಮಿಸದಂತೆ ಮಾಲೀಕರಿಗೆ ತಿಳುವಳಿಕೆ ನೀಡಲು ಕ್ರಮವಹಿಸಲಾಗಿದೆ.<br>• ಅಸುರಕ್ಷಿತ ಕಟ್ಟಡಗಳನ್ನು/ಭಾಗಗಳನ್ನು ತೆರುವುಗೊಳಿಸಿ ಸುರಕ್ಷತಾ ಅಂತರಗಳನ್ನು ಕಾಪಾಡಲು ಮತ್ತು ಸುರಕ್ಷಿತಾ ಅಂತರವನ್ನು ಕಾಪಾಡದೇ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ಬಿತ್ತಿ ಪತ್ರಗಳನ್ನು ಹಂಚಲಾಗಿದೆ.<br>• ಪ್ರತಿ ತಿಂಗಳೂ ಅಸುರಕ್ಷಿತ ಸ್ಥಳಗಳನ್ನು ಗುರುತಿಸಿ, ಅವುಗಳನ್ನು ಆದ್ಯತೆ ಮೇರೆಗೆ ತ್ವರಿತಗತಿಯಲ್ಲಿ ಸರಿಪಡಿಸಲಾಗುತ್ತಿದೆ.<br>• ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಆವರಣದಲ್ಲಿ ವಿದ್ಯುತ್ ಸುರಕ್ಷತಾ ಆಂದೋಲನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ/ಮಕ್ಕಳಿಗೆ ತಿಳುವಳಿಕೆ ನೀಡಲಾಗುತ್ತಿರುತ್ತದೆ. |

| | | |
|---|---|---|
| | | **<u>ಇಲಾಖೆಯ ಅಧಿಕಾರಿ / ನೌಕರರ ಸುರಕ್ಷತೆ ಕುರಿತು:</u>**<br>• ಎಲ್ಲಾ ವಿದ್ಯುತ್ ಉಪ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರರಿಗೆ ಸುರಕ್ಷತಾ ಸಾಧನಗಳನ್ನು ಬಳಸುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ ಹಾಗೂ ಮಾಸಿಕ ಸಭೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.<br>• ಎಲ್ಲಾ ಹಂತದ ಅಧಿಕಾರಿಗಳಿಗೆ/ನೌಕರರಿಗೆ ತರಬೇತಿ ನೀಡಲಾಗುತ್ತಿದೆ.<br>**<u>ವಿದ್ಯುತ್ ಸರಬರಾಜು ಕಂಪನಿಗಳು</u>**<br>**<u>ಸಾರ್ವಜನಿಕರ ಸುರಕ್ಷತೆ ಕುರಿತು</u>**:<br>• ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು, ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೀದಿ ನಾಟಕ ಪ್ರದರ್ಶನ ಮಾಡಲಾಗಿರುತ್ತದೆ.<br>• ವಿದ್ಯುತ್ ಬಗ್ಗೆ ಅರಿವು ಮೂಡಿಸಲು ವಿಭಾಗ/ ಉಪ-ವಿಭಾಗವಾರು ಸುರಕ್ಷತಾ ಮೆರವಣಿಗೆಗಳನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಲಾಗಿರುತ್ತದೆ.<br>• ಸಾರ್ವಜನಿಕರಲ್ಲಿ ವಿದ್ಯುತ್ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಲಾಗಿದೆ.<br>• ಸಾರ್ವಜನಿಕರಲ್ಲಿ ವಿದ್ಯುತ್ ಬಗ್ಗೆ ಅರಿವು ಮೂಡಿಸಲು ಟೆಲಿವಿಷನ್ ಚಾನೆಲ್‌ಗಳಲ್ಲಿ ಪ್ರಸಾರ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br>• ಎಲ್ಲಾ ಉಪವಿಭಾಗಳಲ್ಲಿ ಸುರಕ್ಷತಾ ದಿನವನ್ನು ನಡೆಸಲಾಗುತ್ತಿದೆ.<br>**<u>ಇಲಾಖೆಯ ಅಧಿಕಾರಿ / ನೌಕರರ ಸುರಕ್ಷತೆ ಕುರಿತು:</u>**<br>• ವಾರದಲ್ಲಿ ಒಂದು ದಿನ ಸುರಕ್ಷತಾ ಸಭೆಯನ್ನು ನಡೆಸಿ, ಸುರಕ್ಷತಾ ಉಪಕರಣ/ ಸಲಕರಣೆಯನ್ನು ಬಳಸಿ, ಯಾವುದೇ ಅಪಘಾತ ಉಂಟಾಗದಂತೆ ಕೆಲಸ ನಿರ್ವಹಿಸಲು ಅರಿವು ಮೂಡಿಸಲಾಗುತ್ತಿದೆ.<br>• ನಿರ್ವಹಣಾ ಸಿಬ್ಬಂದಿಗೆ ನಿಯಮಿತ ತರಬೇತಿಗಳನ್ನು/ ಕಾರ್ಯಗಾರಗಳನ್ನು ಎಲ್ಲಾ ವೃತ್ತ/ವಿಭಾಗ/ಉಪ-ವಿಭಾಗಗಳಲ್ಲಿ ನಡೆಸಲಾಗುತ್ತಿದೆ ಮತ್ತು ವಿದ್ಯುತ್ ಸುರಕ್ಷತೆಯ ಬಗ್ಗೆ ಕಿರುಚಿತ್ರವನ್ನು ಪ್ರದರ್ಶಿಸಿ ಜಾಗೃತಿ ಮೂಡಿಸಲಾಗುತ್ತಿದೆ.<br>• ಎಸ್ಕಾಂಗಳ ವತಿಯಿಂದ ನಿರಂತರವಾಗಿ ಸಿಬ್ಬಂದಿಗಳಿಗೆ ಮಾರ್ಗಗಳ ನಿರ್ವಹಣೆಯ ಬಗ್ಗೆ ಕಡ್ಡಾಯವಾಗಿ ತರಬೇತಿ ನೀಡಲಾಗುತ್ತಿದೆ.<br>ಎಲ್ಲಾ ಪವರ್ ಮ್ಯಾನ್ ಗಳಿಗೂ ಸುರಕ್ಷತಾ ಸಾಮಗ್ರಿಗಳನ್ನು ವಿತರಿಸಲಾಗಿದೆ. |

| | | |
|---|---|---|
| ಇ) | ವಿದ್ಯುತ್ ಸರಬರಾಜುದಾರರ ಜಾಲವು ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದ್ದು, ಸುರಕ್ಷಿತ ನಿರ್ವಹಣೆ ಹಾಗೂ ಬಳಕೆಯು ಸವಾಲಾಗಿ ಪರಿಣಮಿಸಿರುವುದು ಮತ್ತು ಮುಂಜಾಗೃತ ಕ್ರಮಗಳು ಸರಿಯಾಗಿ ಪಾಲನೆ ಆಗದಿರುವುದೇ ಅವಘಡಗಳ ಹೆಚ್ಚಳಕ್ಕೆ ಕಾರಣವಾಗಿರುವುದು ಸರ್ಕಾರಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ವಿದ್ಯುತ್ ಜಾಲದ ನಿಯತಕಾಲಿಕ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದ್ದು, ಜೋತುಬಿದ್ದ ವಾಹಕಗಳಿಗೆ ಹಾಗೂ ಕಂಬಗಳ ಅಂತರ ಹೆಚ್ಚಾಗಿದ್ದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ. ಕಿತ್ತು ಹೋಗಿರುವ ಗೈ ಸೆಟ್ ಗಳನ್ನು ಮರು ಅಳವಡಿಸುವುದು, ವಾಲಿರುವ ಕಂಬಗಳನ್ನು ನೇರಗೊಳಿಸುವುದು, ವಿದ್ಯುತ್ ಮಾರ್ಗಗಳಿಗೆ ತಗಲುವ/ ಅಡ್ಡಲಾಗಿರುವ ಗಿಡ ಮರಗಳ ಕೊಂಬೆ/ಬಳ್ಳಿಗಳನ್ನು ಕತ್ತರಿಸುವುದು, ಹಾಳಾಗಿರುವ ವಿದ್ಯುತ್ ಮಾರ್ಗದ ಜಂಪ್ ಗಳನ್ನು ಬದಲಾಯಿಸುವುದು ಹಾಗೂ ಶಿಥಿಲಗೊಂಡ ಕಂಬಗಳು/ ವಾಹಕಗಳು/ನಿರೋಧಕಗಳು ಮತ್ತು ವಿದ್ಯುತ್ ಸಲಕರಣೆಗಳನ್ನು ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ನಿರ್ವಹಣೆಯನ್ನು ಮಾಡಲಾಗುತ್ತಿದ್ದು, ಅವಶ್ಯಕತೆ ಕಂಡು ಬಂದಲ್ಲಿ, ಹೆಚ್ಚುವರಿ ಪರಿವರ್ತಕ ಅಳವಡಿಸುವುದು, ವಾಹಕ ಬದಲಾವಣೆ ಮಾಡುವುದು ಮತ್ತು ಮಾರ್ಗ ಬಲವರ್ಧನೆಯ ಕಾರ್ಯಗಳನ್ನು ಮಾಡಲಾಗುತ್ತಿದೆ. |
| ಈ) | ಈ ನಿತ್ಯ ದುರಂತವನ್ನು ತಡೆಯಲು ಸರ್ಕಾರವು ವಿದ್ಯುತ್ ಪ್ರಸರಣ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸದೆ ವಿದ್ಯುತ್ ಪ್ರಸರಣದಲ್ಲಿ ಕಂಬಗಳು ಹಾಗೂ ತಂತಿಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿಭಾಯಿಸದೇ ಆಧುನಿಕ ಯುಗದಲ್ಲಿಯೂ ಸಹ ಹಳೆಯ ಪದ್ಧತಿಗಳನ್ನೇ ಮುಂದುವರೆಸುತ್ತಿರುವುದಕ್ಕೆ ಕಾರಣಗಳೇನು; ಸರ್ಕಾರದ ಈ ನಿರ್ಲಕ್ಷ್ಯದಿಂದ ಅಮಾಯಕರು ಹಾಗೂ ಇಲಾಖೆಯ ಕೆಳದರ್ಜೆಯ ನೌಕರರು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | • ಎಸ್ಕಾಂಗಳ ವ್ಯಾಪ್ತಿಯಲ್ಲಿ ಗ್ರಾಹಕರಿಗೆ ಉತ್ತಮ ಸೇವೆಗಳನ್ನು ನೀಡಲು ಹಾಗು ಜನ ಜಾನುವಾರುಗಳಿಗೆ ಯಾವುದೇ ತರಹದ ವಿದ್ಯುತ್ ಅವಘಡಗಳು ಸಂಭವಿಸದೇ ಇರಲು ಅನೇಕ ಸುರಕ್ಷತಾ ಹಾಗು ಆಧುನಿಕ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸುತ್ತಿದೆ.<br>• ಓವರ್ ಹೆಡ್ ಲೈನ್ (HT/LT) ಅನ್ನು ಭೂಗತ ಕೇಬಲ್ ಹಾಗು Arial Bunched ಕೇಬಲ್ ಗಳನ್ನಾಗಿ ಬದಲಾಯಿಸುವುದು. ಓವರ್ ಹೆಡ್ ಪರಿವರ್ತಕ ವ್ಯವಸ್ಥೆಯನ್ನು ಭೂಗತ ಮಾಡುವುದು.<br>• ಭೂಗತ ಕೇಬಲ್ ಗಳನ್ನು ನಗರ ಪ್ರದೇಶಗಳಲ್ಲಿ ಹಾಗೂ ಜನಜಂಗುಳಿ ಇರುವ ಪ್ರದೇಶಗಳಲ್ಲಿ ಕವರ್ಡ್ ಕಂಡಕ್ಟರ್ ಗಳನ್ನು ಹಂತ ಹಂತವಾಗಿ ಅಳವಡಿಸಿ ವಿದ್ಯುತ್ ಅವಘಡಗಳನ್ನು ಕಡಿಮೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಸುರಕ್ಷಿತ ಹಾಗು ನಿರ್ವಹಣಾ ರಹಿತ ಉಪಕರಣಗಳಾದ ಕಾಂಪ್ಯಾಕ್ಟ್ RMU, ಕಾಂಪ್ಯಾಕ್ಟ್ ಪರಿವರ್ತಕ ಕೇಂದ್ರಗಳು, Dry Type ಪರಿವರ್ತಕಗಳು, Covered ವಾಹಕಗಳು, Feeder Pillar Box ಗಳನ್ನು ಬಳಸುವುದು.<br>• ವಿದ್ಯುತ್ ಅಪಘಾತಗಳನ್ನು ಕಡಿಮೆ ಮಾಡಲು ಹೆಚ್.ಟಿ / ಎಲ್.ಟಿ ವಿದ್ಯುತ್ ಮಾರ್ಗಗಳು, Arial Bunched ಕೇಬಲ್, ಪರಿರ್ವತಕಗಳು, ಕಂಬಗಳು, RMU ಮುಂತಾದ ಎಲ್ಲಾ ವಿದ್ಯುತ್ ಉಪಕರಣಗಳನ್ನು ನಿರಂತರ ತಪಾಸಣೆ ನಿರ್ವಹಣೆ ಮಾಡುವುದು.<br>• ಸಿಬ್ಬಂದಿ ವರ್ಗದವರಿಗೆ ಗುಣಮಟ್ಟದ ಸುರಕ್ಷತಾ ಸಲಕರಣೆಗಳನ್ನು ಒದಗಿಸುವುದು. |

ಸಂಖ್ಯೆ: ಎನರ್ಜಿ 198 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಛಲವಾದಿ ಟಿ.ನಾರಾಯಣ ಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:633ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ (2021-22, 2022-23 ಮತ್ತು 2023-24) ಕವಿಪ್ರನಿನಿ ಹಾಗೂ ಎಸ್ಕಾಂಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಆಗಿರುವ ಮಾನವ ಪ್ರಾಣ ಹಾನಿ ಮತ್ತು ಜಾನುವಾರು ಪ್ರಾಣ ಹಾನಿ ವಿವರಗಳು:

| ಕಂಪನಿಯ ಹೆಸರು | 2021-22 | | 2022-23 | | 2023-24 | |
|---|---|---|---|---|---|---|
| | ಮಾನವ ಪ್ರಾಣ ಹಾನಿ ಸಂಖ್ಯೆ | ಜಾನುವಾರು ಪ್ರಾಣ ಹಾನಿ ಸಂಖ್ಯೆ | ಮಾನವ ಪ್ರಾಣ ಹಾನಿ ಸಂಖ್ಯೆ | ಜಾನುವಾರು ಪ್ರಾಣ ಹಾನಿ ಸಂಖ್ಯೆ | ಮಾನವ ಪ್ರಾಣ ಹಾನಿ ಸಂಖ್ಯೆ | ಜಾನುವಾರು ಪ್ರಾಣ ಹಾನಿ ಸಂಖ್ಯೆ |
| ಕವಿಪ್ರನಿನಿ | 17 | 1 | 14 | 0 | 14 | 0 |
| ಬೆಸ್ಕಾಂ | 108 | 59 | 134 | 82 | 118 | 61 |
| ಮೆಸ್ಕಾಂ | 67 | 101 | 67 | 133 | 56 | 83 |
| ಸೆಸ್ಕ್ | 62 | 84 | 72 | 117 | 44 | 74 |
| ಹೆಸ್ಕಾಂ | 134 | 119 | 122 | 151 | 136 | 179 |
| ಜೆಸ್ಕಾಂ | 100 | 204 | 99 | 215 | 93 | 270 |